ಶ್ರೀ ಆರ್.ರೋಷನ್‌ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಹೌದು.

ಆ) ಇನ್ನು ಇಲ್ಲ.

ಇ) ಪೂರ್ಣಗೊಂಡಿರುವ ಈ ವಸತಿ ಸೌಕರ್ಯಕ್ಕೆ ಕೂಡು ರಸ್ತೆ ಕೊರತೆ ಇದ್ದು, ಈ ಕೂಡು ರಸ್ತೆ ಮತ್ತು ಕಾಂಪೌಂಡ್ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ನಿರ್ಮಾಣ ಕಾರ್ಯ ಪೂರ್ಣವಾದ ನಂತರ ಯಾತ್ರಿಕರಿಗೆ ಪ್ರವಾಸಿ ಸೌಲಭ್ಯಕ್ಕಾಗಿ ತೆರೆಯಲಾಗುವುದು.

ಕೆ.ಆರ್.ಡಿ.ಸಿ.ಯಿಂದ ಮಂಡ್ಯ ನಗರದ ಮಧ್ಯೆ ಹಾದು ಹೋಗುವ ಓಲ್ಡ್ ಎಂ.ಸಿ. ರಸ್ತೆ ಅಭಿವೃದ್ಧಿ.

1479(2101)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್.ಡಿ.ಸಿ. ವತಿಯಿಂದ ಮಂಡ್ಯನಗರದ ಮೂಲಕ ಹಾದು ಹೋಗುವ ಹಳೇ ಎಂ.ಸಿ.ರಸ್ತೆಯನ್ನು (ಓಲ್ಡ್ ಎಂಸಿ.ರೋಡ್) ಅಭಿವೃದ್ಧಿಗೊಳಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆಯೆ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ಕಾಮಗಾರಿಯು ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಮಂಡ್ಯ ನಗರದ ಮೂಲಕ ಹಾದು ಹೋಗುವ ಹಳೆ ಎಂಸಿ. ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಆ) ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ ನಂ.೧೭ರ ೯೭.೦೦ ಕಿಮೀ. ಯಿಂದ ೧೦೧.೦೦ ಕಿಮೀ. ರಸ್ತೆಯ ಮಂಡ್ಯ ಪಟ್ಟಣದಲ್ಲಿ ಹಾಯ್ದು ಹೋಗುತ್ತದೆ. ಈ ರಸ್ತೆಯು ಪಟ್ಟಣದ ಮಧ್ಯದಲ್ಲಿ ಜನನಿಬಿಡ ಪ್ರದೇಶದಲ್ಲಿ ಹಾಯ್ದು ಹೋಗುವುದರಿಂದ ಮತ್ತು ಇತರೆ ಕೂಡು ರಸ್ತೆಗಳು ಇದಕ್ಕೆ ಬಂದು ಸೇರುವುದರಿಂದ ನೇರ ಸಂಚಾರದ

ವಾಹನಗಳಿಗೆ ಅಡೆತಡೆಯಾಗುತ್ತದೆ. ಆದ್ದರಿಂದ ಈಗಿರುವ ರಸ್ತೆಯ ಉತ್ತರ ದಿಕ್ಕಿನಲ್ಲಿ ಇರುವ ಹಳೆಯ ರಸ್ತೆಯನ್ನು (ಹಳೆ ಎಂ.ಸಿ. ರಸ್ತೆಯನ್ನು) ಅಭಿವೃದ್ಧಿಪಡಿಸಿ ವಾಹನಗಳ ಸಂಚಾರ ಸುಗಮಗೊಳಿಸಲು ಯೋಜಿಸಲಾಗಿದೆ.

ಇ) ಕಾಮಗಾರಿಯ ಅಂದಾಜುಪಟ್ಟಿ ತಯಾರಿಸುವ ಹಂತದಲ್ಲಿದೆ.

ಮಂಡ್ಯ ನಗರದಲ್ಲಿ ಕ್ರೀಡಾ ಹಾಸ್ಟೆಲನ್ನು ಪುನರಾರಂಭಿಸುವುದು

1480 (2102)

ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ): ಮಾನ್ಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಕ್ರೀಡಾ ಹಾಸ್ಟೆಲನ್ನು ಪ್ರಾರಂಭಿಸಲಾಗುವುದೇ?

ಆ) ಪ್ರಸ್ತುತ ಕ್ರೀಡಾ ಹಾಸ್ಟೆಲ್ ಮುಚ್ಚಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಹಾಸ್ಟೆಲ್ ಮುಚ್ಚಿರುವುದಕ್ಕೆ ಕಾರಣಗಳೇನು?

ಈ) ಈ ಹಾಸ್ಟೆಲನ್ನು ಎಂದಿನಿಂದ ಪುನರಾರಂಭಗೊಳಿಸಲಾಗುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) 'ಈ'ರಲ್ಲಿ ನೀಡಿರುವ ಉತ್ತರ ಅನ್ವಯಿಸುತ್ತದೆ.

ಆ) ಹೌದು.

ಇ) ೧೯೯೯-೨೦೦೦ನೇ ಸಾಲಿನ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಹಣ ಒದಗಿಸದ ಕಾರಣ ಕ್ರೀಡಾ ವಸತಿ ನಿಲಯವನ್ನು ಮುಚ್ಚಲಾಗಿತ್ತು.

ಈ) ಇದು ಜಿಲ್ಲಾ ಪಂಚಾಯತ್ ಆಯವ್ಯಯದ ಯೋಜನೆಯಾಗಿದ್ದು ಜಿಲ್ಲಾ ಪಂಚಾಯತ್ ವತಿಯಿಂದ ಹಣ ಒದಗಿಸಿದ ನಂತರ ಇದನ್ನು ಪುನರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.